ಇರಲಿಲ್ಲ. ಮತ್ತೆರಡು ದಿನ ಅಮ್ಮನ ಬಳಿ ಏನೇನೋ ಗೋಗರೆದು ಏನೂ ಗಿಟ್ಟದೆ ಕೊನೆಗೆ ಬೆಂಗಳೂರಿನ ಬಸ್ ಹತ್ತಿದ್ದ.

ಮತ್ತದೇ ಮೂರನೇ ಮಹಡಿಯ ಕೋಣೆ, ಅಚ್ಯುತನ ವ್ಯಂಗ್ಯದ ನಗು ಅವನನ್ನು ಸ್ವಾಗತಿಸಿತ್ತು. ಅಂದಿನಿಂದ ಸಾಧ್ಯವಾದಷ್ಟೂ ರೂಮಿನಿಂದ ಹೊರಗೆ ಹೋಗುವುದನ್ನು ನಿಲ್ಲಿಸಿದ್ದ. ಕೆಲಸ ಅರಸಿಕೊಂಡು ಸಂದರ್ಶನಗಳಿಗೆ ಹಾಜರಾಗುವುದನ್ನಂತೂ ಬಿಟ್ಟುಬಿಟ್ಟಿದ್ದ. ಅಪ್ಪ ಪ್ರತಿತಿಂಗಳ ಮೊದಲಿಗೆ ಹಣ ಹಾಕುತ್ತಿದ್ದರೂ ಅದನ್ನು ಎಟಿಎಂನಿಂದ ತೆಗೆಯುವಾಗ ಎದೆಗೆ ಸೂಜಿ ಚುಚ್ಚಿದಂತೆ ಚಡಪಡಿಸುತ್ತಿದ್ದ. ಎಷ್ಟೋ ಸಲ ವಿಪಿನ್ ಫೋನ್ ಬಂದರೂ ರಿಸೀವ್ ಮಾಡುತ್ತಲೇ ಇರಲಿಲ್ಲ.

ಮೊನ್ನೆಯಷ್ಟೇ ಫೋನ್ ಮಾಡಿದ್ದ ಅಪ್ಪ ಕರುಣಾಳ ವಿಷಯ ಹೇಳಿದ್ದ. ಹುಡುಗಿ ಸಿರ್ಸಿ ಸೀಮೆಯ ಗೋಳಿಮಕ್ಕಿಯವಳು. ಬೆಂಗಳೂರಿನ ಯಾವುದೋ ಕಂಪೆನಿಯಲ್ಲಿ ಕೆಲಸ ಮಾಡುತ್ತಾಳೆ. ಬೇಡಿಕೆಗಳು ಅವವೆ... ಮನೆಯಲ್ಲಿ ಸ್ವಲ್ಪವಾದರೂ ಆಸ್ತಿ ಇರಬೇಕು. ಗಂಡು ಬೆಂಗಳೂರಿನಲ್ಲಿ ಕೆಲಸದಲ್ಲಿರಬೇಕು. ಸದಾನ ವಿಷಯ ಪ್ರಸ್ತಾಪಿಸಿದಾಗ 'ನಾವಿಬ್ಬರೂ ಒಂದು ಸಲ ಭೇಟಿ ಮಾಡಿ ಮಾತನಾಡಿಕೊಳ್ತೇವೆ. ನಂತರ ನೀವು ಮುಂದುವರೀರಿ' ಎಂದು ಹೇಳಿದ್ದಾಳಂತೆ. ಅದರಂತೆಯೇ ಇಂದು ಸಂಜೆ ಐದೂವರೆಗೆ ಎಂ.ಜಿ. ರಸ್ತೆಯ ಕಾಫಿ ಬಾರ್‌ನಲ್ಲಿ ಭೇಟಿಗೆ ಸಮಯ ನಿಗದಿಯಾಗಿತ್ತು.

★★★

ಸದಾ ಎಂ.ಜಿ ರಸ್ತೆಯ ಅಷ್ಟೆತ್ತರದ ಬಾರ್ಟನ್ ಸೆಂಟರ್ ಕಾಲುಬುಡದಲ್ಲಿ ಹರಡಿಕೊಂಡಿದ್ದ ಕಾಫೀ ಬಾರ್ ಸಮೀಪ ಬರುವಷ್ಟರಲ್ಲಿ ಸಂಜೆ ಐದುಮುಕ್ಕಾಲು ದಾಟಿತ್ತು. ಶಿವಾಜಿ ನಗರದಲ್ಲಿ ಬಸ್ಸಿಳಿದು ನಡೆದುಕೊಂಡು ಬಂದಿದ್ದರಿಂದ ಮೈ ಒಳಗೊಳಗೆ ತೆಳ್ಳಗೆ ಬೆವರಿತ್ತು. ಭಾನುವಾರವಾದ್ದರಿಂದ ಎಂ.ಜಿ. ರಸ್ತೆಯಲ್ಲಿ ಜನರ ಓಡಾಟ ಜಾಸ್ತಿ ಇತ್ತು. ರಸ್ತೆಯಾಚೆಗಿನ ಮೆಟ್ರೊ ರಂಗೋಲಿ ಕಲಾ ಕೇಂದ್ರದಲ್ಲಿ ಯಾವುದೋ ಸಂಗೀತ ಕಾರ್ಯಕ್ರಮದ ಡ್ರಮ್ಸ್ ಸದ್ದು ಜೋರಾಗಿ ಕೇಳಿಸುತ್ತಿತ್ತು.

ಕಿಸೆಯಿಂದ ಕರ್ಚೀಪು ತೆಗೆದು ಹುಬ್ಬು ಮಧ್ಯದ ಕುಂಕುಮ ಅಳಿಸದಂತೆ ತೆಳ್ಳಗೆ ಮುಖ ಒರೆಸಿಕೊಂಡು ಕಾಫಿ ಬಾರ್‌ನತ್ತ ಕಣ್ಣು ಹಾಯಿಸಿದ. ಒಂದು ಬದಿಯಲ್ಲಿ, ರಸ್ತೆಯಲ್ಲಿ ಹೋಗಿಬರುವ ಜನರಿಗೆ ಒಮ್ಮೆಲೆ ಕಾಣದಂತೆ ಷೋ ಗಿಡದ ಮರೆಯಲ್ಲಿನ ಟೇಬಲ್ ಆರಿಸಿಕೊಂಡು ಕೂತಿದ್ದ ಕರುಣಾಳನ್ನು ಗುರ್ತಿಸುವುದು ಕಷ್ಟವಾಗಲಿಲ್ಲ. ವಾಟ್ಸಾಪ್, ಫೇಸ್‌ಬುಕ್‌ಗಳಲ್ಲಿ ಸಾಕಷ್ಟು ಫೋಟೊ ನೋಡಿದ್ದ. ನೀಲಿ ಬಣ್ಣದ ಮೇಲೆ ಬಿಳಿ ಚಿತ್ತಾರಗಳಿದ್ದ ಚೂಡಿದಾರ ಧರಿಸಿದ್ದಳು. ಅವನು ನಿಂತಲ್ಲಿಂದ ಅವಳು ಯಾವ ಬಣ್ಣದ ಪ್ಯಾಂಟು ಹಾಕಿದ್ದಾಳೆಂದು ಕಾಣುತ್ತಿರಲಿಲ್ಲ. ಬಹುಶಃ ಕಪ್ಪು ಜೀನ್ಸ್ ತೊಟ್ಟಿರಬೇಕು ಎಂದು ಊಹಿಸಿದ. ಫೋಟೊದಲ್ಲಿಗಿಂತ ತುಂಬ ಏನೂ ಬೇರೆ ಥರ ಇರಲಿಲ್ಲ. ಸುಮ್ಮನೇ ಸ್ವಲ್ಪ ಹೊತ್ತು ಅವಳನ್ನೇ ನೋಡುತ್ತಾ ನಿಂತ. ಹೆಗಲ ಮೇಲೆ ಹರಡಿಕೊಂಡಿದ್ದ ಹೊಳಪು ಕೂದಲನ್ನು ಆಗೀಗ ಸವರಿಕೊಳ್ಳುತ್ತಿದ್ದಳು. ಮತ್ತೆ ಮತ್ತೆ ಮೊಬೈಲ್ ತೆಗೆದು ಮತ್ತೆ ಮುಚ್ಚಿಡುತ್ತಿದ್ದಳು. ಒಮ್ಮೆ ಮೊಬೈಲ್ ಸ್ಕ್ರೀನಲ್ಲೇ ನೋಡಿಕೊಳ್ಳುತ್ತಾ ತುಟಿಗಳಿಗೆ ಅದೇನೋ ಒತ್ತಿಕೊಂಡಳು. ಎಡಗೈಗೆ ಕಪ್ಪು ದಾರ ಸುತ್ತಿದ್ದಳು. ಕತ್ತಿನಲ್ಲೊಂದು ಸಪೂರ ಚಿನ್ನದೆಳೆ ಸರ. ಟೇಬಲ್ ಮೇಲಿದ್ದ ಗ್ಲಾಸೆತ್ತಿಕೊಂಡು ತುಟಿಗೆ ತಾಕಿಸಿ ಮತ್ತೆ ಕೆಳಗಿಳಿಟ್ಟಳು. ಮತ್ತೊಮ್ಮೆ ಮೊಬೈಲೆತ್ತಿಕೊಂಡು ಏನೋ ಕುಟ್ಟಿ ಟೇಬಲ್